Indian Journal of History and Archaeology

ISSN (E):2582-225X
VOL-2, ISSUE -3,SEPTEMBER-OCTOBER, 2020, 01-11

# ಕರ್ನಾಟಕದಲ್ಲಿರುವ ಬಾಹುಬಲಿಯ ಉಬ್ಬು ಶಿಲ್ಪಗಳು

**ಡಾ. ಅಪ್ಪಣ್ಣ ಎನ್. ಹಂಜೆ**

**ಡಾ. ಅಪ್ಪಣ್ಣ ಎನ್. ಹಂಜೆ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ

"ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ" ಎಂಬ ವಿಶ್ವಶಾಂತಿ ಮಹಾಮಂತ್ರವನ್ನು ಮಾನವಕುಲಕ್ಕೆ ಸಾರಿದ ಪ್ರಥಮ ಮೋಕ್ಷಗಾಮಿ ಬಾಹುಬಲಿಯ ಶಿಲ್ಪಗಳು ಕರ್ನಾಟಕದ ಜೈನ ಶಿಲ್ಪಕಲಾ ಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಈ ನಾಡಿನಲ್ಲಿ ಕ್ರಿ.ಪೂ. ಸುಮಾರು 2ನೆಯ ಶತಮಾನದಿಂದಲೂ ಬೆಳೆದು ಬಂದಿರುವ ಬಾಹುಬಲಿಯ ಕಥಾಪರಂಪರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಬಾಹುಬಲಿಯನ್ನು ಕೇಂದ್ರ ಮತ್ತು ಪೂರಕವಾಗಿಟ್ಟುಕೊಂಡು ನೂರಾರು ಕೃತಿಗಳು, ಕಾವ್ಯಗಳು, ಪುರಾಣಗಳು ರಚನೆಯಾಗಿವೆ. ಬಾಹುಬಲಿ ತನ್ನ ಹಿರಿಯ ಸಹೋದರ ಭರತನೊಂದಿಗೆ ದೃಷ್ಟಿಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧದಲ್ಲಿ ಸೆಣಸಿ ಜಯಶೀಲನಾಗುತ್ತಾನೆ. ಆದರೂ ಕೊನೆಯಲ್ಲಿ ರಾಜ್ಯವನ್ನು ತ್ಯಜಿಸಿ ಘೋರ ತಪಸ್ಸಿಗೆ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ಈತನ ಕಾಲುಗಳ ಇಕ್ಕೆಲಗಳಲ್ಲಿ ಹಾವಿನ ಹುತ್ತಗಳು ಬೆಳೆದು ಮಾಧವೀ ಲತೆಗಳು ಈತನ ಅಂಗಾಂಗಗಳನ್ನು ಬಳಸಿ ಮುಗಿಲೆತ್ತರಕ್ಕೆ ಬೆಳೆಯುತ್ತವೆ. ಆದರೂ ಈತನ ತಪಸ್ಸು ಅವಿಚಲವಾಗಿ ಮುಂದುವರಿಯುತ್ತದೆ. ಮುಗಿಲಲ್ಲಿ ಹೆಣೆದುಕೊಂಡಿರುವ ಮಾಧವೀ ಲತೆಗಳು ಆಕಾಶಮಾರ್ಗವಾಗಿ ಸಾಗುವ ವಿದ್ಯಾಧರ ದಂಪತಿಗಳಿಗೆ ತಡೆಯಾಗುತ್ತವೆ. ಇದನ್ನು ದಾಟಿ ಹೋಗುವಾಗ ಎಲ್ಲಿ ಬಾಹುಬಲಿಯ ತಪಸ್ಸು ಭಂಗವಾಗುತ್ತದೆಯೋ ಎಂದು ಅವರಿಗೆ ಭಯ. ಆದ್ದರಿಂದ ಅವರು ಆಗಾಗ್ಗೆ ಕೆಳಗಿಳಿದು ಬಂದು ಮಾಧವೀ ಲತೆಗಳನ್ನು ಬಿಡಿಸಿ ಈತನಿಗೆ ವಂದಿಸಿ ಹೋಗುತ್ತಾರೆ. ಈ ಕಥಾನಿರೂಪಣೆಯೇ

ಬಾಹುಬಲಿಯ ಬಹುತೇಕ ಉಬ್ಬುಶಿಲ್ಪಗಳಲ್ಲಿ ಅಭಿವ್ಯಕ್ತವಾಗಿದೆ.[1] ಕರ್ನಾಟಕದಲ್ಲಿರುವ ಬಾಹುಬಲಿಯ ಶಿಲ್ಪಗಳನ್ನು ಉಬ್ಬುಶಿಲ್ಪಗಳು, ಏಕಶಿಲಾ (ದುಂಡು) ಶಿಲ್ಪಗಳು, ಲೋಹದ ಪ್ರತಿಮೆಗಳು ಮತ್ತು ವರ್ಣಚಿತ್ರಗಳು ಎಂದು ನಾಲ್ಕು ಬಗೆಯಲ್ಲಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದಲ್ಲಿರುವ ಬಾಹುಬಲಿಯ ಕೆಲವು ಅಪರೂಪದ ಉಬ್ಬುಶಿಲ್ಪಗಳನ್ನು ಗಮನಿಸಲಾಗಿದೆ.

**1. ಬಾಹುಬಲಿಯ ಉಬ್ಬುಶಿಲ್ಪಗಳು**

ಕರ್ನಾಟಕದಲ್ಲಿ ಬಾಹುಬಲಿಯನ್ನು ಉಬ್ಬುಶಿಲ್ಪಗಳಲ್ಲಿ ಅಂದರೆ ಗುಹಾಲಯಗಳ ಭಿತ್ತಿಗಳು ಮತ್ತು ಬಂಡೆಗಳ ಮೇಲೆ ಕಂಡರಿಸುವ ಪರಂಪರೆ ಕ್ರಿ.ಶ. ಸುಮಾರು 6ನೆಯ ಶತಮಾನದಿಂದಲೂ ಗೋಚರಿಸುತ್ತದೆ. ಈ ನಾಡಿನಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳಿರುವ ಸ್ಥಳಗಳು ಮತ್ತು ಅವುಗಳ ಕಾಲಮಾನ, ನಿರ್ಮಾತೃರು, ಪ್ರತಿಮಾ ಲಕ್ಷಣಗಳು ಈ ಕೆಳಗಿನಂತಿವೆ.

**1.1. ಬಾದಾಮಿ**

ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ಕೇಂದ್ರ ಬಾದಾಮಿ ಪಟ್ಟಣವು, ಕ್ರಿ.ಶ. 500 ರಿಂದ 813ರವರೆಗೆ ಆಳ್ವಿಕೆ ಮಾಡಿರುವ ಚಲುಕ್ಯರ ರಾಜಧಾನಿಯಾಗಿತ್ತು. ಚಲುಕ್ಯರು ಮತ್ತು ಅವರ ಮಾಂಡಲಿಕರು ಜೈನ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟಿದ್ದರು. ಅಂದು ಕೊಪ್ಪಳ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಅಣ್ಣಿಗೇರಿ, ಲಕ್ಷ್ಮೇಶ್ವರ, ಹೂಲಿ, ಆಡೂರು, ಹೊಂಬುಜ, ಹಳ್ಳೂರು, ಶ್ರವಣಬೆಳಗೊಳ, ಕೆಲಸೂರು, ಕರಟಗೇರಿ, ಬಂಕಾಪುರ, ಭಾಲ್ಕಿ, ಗಡಿಕೇಶ್ವಾರ, ಜೇಬುಳಗೇರಿ, ಕೋಗಳಿ, ಮಲ್ಲಸಮುದ್ರ, ನವಿಲೂರು, ಹಲಸಿ, ಬಸ್ತಿಪುರ (ಕೊಳ್ಳೆಗಾಲ), ನರಸಿಂಹರಾಜಪುರ, ಕೀರ್ತಿಪುರ (ಕಿತ್ತೂರು) ಮೊದಲಾದೆಡೆಗಳಲ್ಲಿ ಬಸದಿಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ, ದಾನ–ದತ್ತಿಗಳು ಇತ್ಯಾದಿ ಜೈನ ಚಟುವಟಿಕೆಗಳು ನಡೆದಿವೆ.[2] ಬಾದಾಮಿ ಪಟ್ಟಣದ ಬೆಟ್ಟದಲ್ಲಿ ಕ್ರಿ.ಶ. ಸುಮಾರು 7ನೆಯ ಶತಮಾನದಲ್ಲಿ ಕೊರೆಯಲ್ಪಟ್ಟಿರುವ ಜೈನ ಗುಹಾಲಯವಿದೆ. ಇದು ಬೆಟ್ಟದ ಮೇಲಿರುವುದರಿಂದ ಮತ್ತು ಇಲ್ಲಿರುವ ಉಳಿದ ಗುಹಾಲಯಗಳಿಗಿಂತ ಮೇಲಿರುವುದರಿಂದ ಇದನ್ನು 'ಮೇಗಣ ಬಸದಿ', 'ಮೇಣ ಬಸದಿ' ಎಂದೆಲ್ಲ ಕರೆಯಲಾಗುತ್ತದೆ.

ಈ ಗುಹಾಲಯದ ವರಾಂಡದ ಬಲಬದಿಯ ಭಿತ್ತಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಏಳು ಅಡಿ ಎಂಟು ಅಂಗುಲ ಎತ್ತರವಾಗಿದೆ. ಪೀಠದ ಮೇಲೆ ನಿಂತಿರುವ ಬಾಹುಬಲಿಯ ಹಿನ್ನೆಲೆಯಲ್ಲಿ ಕಾಡಿನ ಚಿತ್ರಣವಿದೆ. ಕೈಗಳು ಮತ್ತು ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ಕಾಲುಗಳ ಹತ್ತಿರ ಬೆಳೆದಿರುವ ಹುತ್ತಗಳಲ್ಲಿ ನಾಲ್ಕು ಸರ್ಪಗಳು ಹೆಡೆಗಳನ್ನೆತ್ತಿ ಹರಿದಾಡುತ್ತಿವೆ. ಜಡೆಗಟ್ಟಿದ ಕೂದಲುಗಳು

(ನೀಳವಾದ ಕೇಶರಾಶಿ) ಭುಜಗಳ ಪಾರ್ಶ್ವಗಳಲ್ಲಿ ಇಳಿಬಿದ್ದಿವೆ. ಕೈಗಳು ಮತ್ತು ಕಾಲುಗಳನ್ನು ಬಳಸಿರುವ ಮಾಧವೀ ಲತೆಗಳನ್ನು ಇಬ್ಬರು ವಿದ್ಯಾಧರಿಯರು (ಖೇಚರಿಯರು) ಬಿಡಿಸುತ್ತ ನಿಂತಿದ್ದಾರೆ. ಇನ್ನಿಬ್ಬರು ವಿದ್ಯಾಧರಿಯರು ಬಾಹುಬಲಿಯ ಪಾದದಡಿಯಲ್ಲಿ ಅಂಜಲಿಮುದ್ರಾಸಕ್ತರಾಗಿ ವೀರಾಸನದಲ್ಲಿ ಆಸೀನರಾಗಿದ್ದಾರೆ. ಈ ಬಾಹುಬಲಿಯ ಉಬ್ಬುಶಿಲ್ಪದಲ್ಲಿ ಉತ್ತಮವಾದ ಕಲ್ಪನೆ ಮತ್ತು ಸ್ಫುಟವಾದ ಕೆತ್ತುವಿಕೆ ಗೋಚರಿಸುತ್ತದೆ.

### 1.2. ಐಹೊಳೆ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಐಹೊಳೆ ಗ್ರಾಮದ ಬೆಟ್ಟದಲ್ಲಿ ಬಾದಾಮಿ ಚಲುಕ್ಯರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. ಸುಮಾರು 7ನೆಯ ಶತಮಾನ) ಕೊರೆಯಲ್ಪಟ್ಟಿರುವ ಜೈನ ಗುಹಾಲಯವಿದೆ. ಇದರ ವರಾಂಡದ ಬಲಬದಿಯ ಭಿತ್ತಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಐದು ಅಡಿ ಹತ್ತು ಅಂಗುಲ ಎತ್ತರವಾಗಿದೆ. ಪೊದೆಗಳ ಮಧ್ಯೆ ಪೀಠದ ಮೇಲೆ ನಿಂತಿರುವ ಬಾಹುಬಲಿಯ ಕಾಲುಗಳ ಪಾರ್ಶ್ವಗಳಲ್ಲಿ ಬಳ್ಳಿ, ಹುತ್ತ, ಸರ್ಪಗಳನ್ನು ಈ ಮೇಲಿನ ಬಾದಾಮಿ ಪಟ್ಟಣದ ಉಬ್ಬುಶಿಲ್ಪದಲ್ಲಿದ್ದಂತೆಯೇ ತೋರಿಸಲಾಗಿದೆ. ಆದರೆ ಇಲ್ಲಿ ಬಾಹುಬಲಿಯ ಪಾರ್ಶ್ವಗಳಲ್ಲಿ ತ್ರಿಭಂಗಿಯಲ್ಲಿ ನಿಂತು ಮಾಧವೀ ಲತೆಗಳನ್ನು ಬಿಡಿಸುವುದರಲ್ಲಿ ಮಗ್ನರಾಗಿರುವ ವಿದ್ಯಾಧರಿಯರು ಕಿರೀಟಮಕುಟ, ಗ್ರೈವೇಯಕಹಾರಗಳು, ಕರ್ಣಕುಂಡಲಗಳು, ಛನ್ನವೀರದಂತೆ ಸಾಗಿರುವ ಸ್ತನಸೂತ್ರ, ಕಂಕಣಗಳು, ಪಾದಸರಗಳು, ಕಟಿವಸ್ತ್ರ ಮೊದಲಾದ ವಸ್ತ್ರಾಭರಣಗಳನ್ನು ಧರಿಸಿ ಸರ್ವಾಲಂಕೃತರಾಗಿದ್ದಾರೆ. ಬಾಹುಬಲಿಯ ಶಿಲ್ಪಕ್ಕಿಂತ ಈ ವಿದ್ಯಾಧರಿಯರ ಶಿಲ್ಪಗಳನ್ನು ಆಕರ್ಷಕವಾಗಿ ಕೆತ್ತಿರುವುದು ಗಮನೀಯವಾಗಿದೆ. ಆಕಾಶದಲ್ಲಿ ಇಬ್ಬರು ವಿದ್ಯಾಧರರು ತೇಲುತ್ತಿದ್ದಾರೆ. ಶಿಲ್ಪದ ಹಿನ್ನೆಲೆಯಲ್ಲಿ ವೃಕ್ಷಗಳನ್ನು ಚಿತ್ರಿಸಲಾಗಿದೆ. ಈ ಶಿಲ್ಪ ಸಂಕೀರ್ಣವು ಜಿನಸೇನಾಚಾರ್ಯರ 'ಪೂರ್ವಪುರಾಣ' ಕೃತಿಯಲ್ಲಿನ ಬಾಹುಬಲಿಯ ಕಥಾನಿರೂಪಣೆಯನ್ನು ನೆನಪಿಸುತ್ತದೆ.[3]

### 1.3. ಶ್ರವಣಬೆಳಗೊಳ

ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಚಿಕ್ಕಬೆಟ್ಟದ (ಚಂದ್ರಗಿರಿ) ಮೇಲ್ಭಾಗದಲ್ಲಿ ಹೊಯ್ಸಳರ ರಾಜಶ್ರೇಷ್ಠಿಗಳಾದ (ವರ್ತಕರು) ಹೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿ ಎಂಬುವವರು ತಮ್ಮ ಮಾತೆಯರಾದ ಮಾಚಿಕಬ್ಬೆ ಹಾಗೂ ಶಾಂತಿಕಬ್ಬೆಯರ ಪರೋಕ್ಷ ವಿನಯಾರ್ಥವಾಗಿ ಕ್ರಿ.ಶ. 1117ರ ಮೇ 15ರಂದು ಬಾಹುಬಲಿಯ ಬಸದಿಯನ್ನು ಮಾಡಿಸಿದ್ದಾರೆ.[4] ಈ ಬಸದಿಯ ಮುಂಭಾಗದಲ್ಲಿ ತೇರಿನಾಕಾರದ ಆಕರ್ಷಕ

ಮಂದಾರ ಇರುವುದು. ಹೀಗಾಗಿ ಈ ಬಸದಿಯನ್ನು 'ತೇರಿನ ಬಸದಿ' ಎಂದು ಕರೆಯಲಾಗಿದೆ. ಈ ಬಸದಿಯ ಗರ್ಭಗೃಹದಲ್ಲಿ ಐದು ಅಡಿ ಎತ್ತರವಾದ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಬಾಹುಬಲಿಯ ಶಿರದ ಮೇಲೆ ಮುಕ್ಕೊಡೆಯಿದ್ದು, ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಕೈಗಳು ಮತ್ತು ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ತಲೆಗೂದಲುಗಳು ಭುಜಗಳ ಮೇಲೆ ಇಳಿಬಿದ್ದಿವೆ.

ದೊಡ್ಡಬೆಟ್ಟದ ಮೇಲ್ಭಾಗದಲ್ಲಿರುವ ಅಖಂಡ ಬಾಗಿಲಿನ ಬಲಬದಿಯಲ್ಲಿರುವ ಒಂದು ಅಂಕಣದ ಚಿಕ್ಕ ಬಸದಿಯಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದನ್ನು ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛ ಪರಂಪರೆಯ ಗಂಡವಿಮುಕ್ತ ಸೈದ್ಧಾಂತಿಕದೇವನ ಶಿಷ್ಯನೂ, ಹೊಯ್ಸಳರ ವಿಷ್ಣುವರ್ಧನನ ದಂಡನಾಯಕನೂ ಆದ ಭರತಮಯ್ಯನು ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಮಾಡಿಸಿದ್ದಾನೆ.[5] ಮೂಲದ ಬಂಡೆಯನ್ನು ಕೊರೆದು ಮಾಡಿರುವ ಈ ಶಿಲ್ಪವು ಐದು ಅಡಿ ಎತ್ತರವಾಗಿದೆ. ಬಾಹುಬಲಿಯ ಕೈಗಳು ಮತ್ತು ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ಆದರೆ ಪಾದದಡಿಯಲ್ಲಿ ಹುತ್ತ ಮತ್ತು ಸರ್ಪಗಳನ್ನು ತೋರಿಸಿಲ್ಲ.

ದೊಡ್ಡಬೆಟ್ಟದ ಬಾಹುಬಲಿಯ ಶಿಲ್ಪದ ಸುತ್ತಲೂ ಹೊಯ್ಸಳರ ದಂಡನಾಯಕ ಗಂಗರಾಜನು ಕ್ರಿ.ಶ. 1117ರಲ್ಲಿ ಮಾಡಿಸಿದ ಸುತ್ತಾಲಯದ (ರಕ್ಷಣಾ ಗೋಡೆ) ಅಂತ್ಯದಲ್ಲಿ ಗಣಧರ ಪಾದಚರಣದ ಪಕ್ಕದಲ್ಲಿ ಐದು ಅಡಿ ಎತ್ತರವಾದ ಬಾಹುಬಲಿಯ ಉಬ್ಬುಶಿಲ್ಪವಿದೆ.[6] ಇದು ಐದು ಅಡಿ ಎತ್ತರವಾಗಿದೆ. ಇದರಲ್ಲಿ ಬಾಹುಬಲಿಯ ಪಾದದಿಂದ ಏಳು ಅಡಿ ಎತ್ತರವಿರುವ ಪ್ರಭಾವಳಿಯಲ್ಲಿ, ಪಾದದ ಪಕ್ಕದಿಂದ ಹಬ್ಬಿರುವ ಮಾಧವೀ ಲತೆಗಳು ಹರಡಿಕೊಂಡಿವೆ. ಬಳ್ಳಿಯ ವೃತ್ತಾಕಾರದ ಅಲಂಕಾರಗಳಲ್ಲಿ ನವಿಲುಗಳು ಮತ್ತು ದೇವತೆಗಳನ್ನು ತೋರಿಸಿರುವುದು ಗಮನೀಯವಾಗಿದೆ. ಪಾರ್ಶ್ವಗಳಲ್ಲಿ ಇಬ್ಬರು ವಿದ್ಯಾಧರಿಯರು ಬಳ್ಳಿಯನ್ನು ಬಿಡಿಸುತ್ತ ನಿಂತಿದ್ದಾರೆ.

ದೊಡ್ಡಬೆಟ್ಟದ ಮೇಲಿರುವ ಬಾಹುಬಲಿಯ ಶಿಲ್ಪದ ಮುಂಭಾಗದ ಪ್ರವೇಶದ್ವಾರದ ಮೇಲ್ಭಾವಣಿಯ ಬಲಬದಿಯ ಗೂಡಿನಲ್ಲಿ ಬಾಹುಬಲಿಯ ಗಾರೆಯ ಚಿಕ್ಕ ಉಬ್ಬುಶಿಲ್ಪವಿದೆ. ಇದರಲ್ಲಿ ಬಾಹುಬಲಿಯ ಕೈ ಮತ್ತು ಕಾಲುಗಳನ್ನು ಮಾಧವೀ ಲತೆಗಳು ಸುತ್ತಿಕೊಂಡಿವೆ. ದೊಡ್ಡಬೆಟ್ಟದಲ್ಲಿ ಅಖಂಡ ಬಾಗಿಲಿನ ಬಲಗಡೆಯಿರುವ ಸಿದ್ಧರಗುಂಡಿನಲ್ಲಿ ಬಾಹುಬಲಿ ಪರ್ಯಂಕಾಸನದಲ್ಲಿ ಆಸೀನನಾಗಿರುವ ಎರಡು ಉಬ್ಬುಶಿಲ್ಪಗಳಿವೆ. ಈ ಎರಡೂ ಉಬ್ಬುಶಿಲ್ಪಗಳು ಬಾಹುಬಲಿಯ ಪ್ರತಿಮಾ ಲಕ್ಷಣಗಳ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿವೆ.[7]

### 1.4. ಹಳ್ಳೂರು

ಬಾಗಲಕೋಟೆ ಜಿಲ್ಲೆ ಮತ್ತು ತಾಲ್ಲೂಕಿನ ಹಳ್ಳೂರು ಗ್ರಾಮವು ಮಳಖೇಡದ ರಾಷ್ಟ್ರಕೂಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಇಲ್ಲಿಯ ಬೆಟ್ಟದ ಮೇಲ್ಭಾಗದಲ್ಲಿ ಅಮೋಘವರ್ಷ ನೃಪತುಂಗನ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು ೯ನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ಬಸದಿಯಿದೆ. ಇದು ಬೆಟ್ಟದ ಮೇಲಿರುವುದರಿಂದ ಇದನ್ನು 'ಮೇಲ್ಗುಡಿ' ಎಂದು ಕರೆಯಲಾಗುತ್ತದೆ. ಈ ಬಸದಿಯ ಮುಖಮಂಟಪದ ಹೊರಭಿತ್ತಿಯ ಮೇಲೆ ಬಾಹುಬಲಿಯ ನಾಲ್ಕು ಮತ್ತು ಪಾರ್ಶ್ವನಾಥ ತೀರ್ಥಂಕರನ ನಾಲ್ಕು ಕಾಯೋತ್ಸರ್ಗದ ಉಬ್ಬುಶಿಲ್ಪಗಳಿವೆ. ಇವು ನಾಲ್ಕು ಅಡಿ ಎತ್ತರವಾಗಿವೆ. ಬಾಹುಬಲಿಯ ಎರಡು ಉಬ್ಬುಶಿಲ್ಪಗಳಲ್ಲಿ ಹುತ್ತದಿಂದ ಹೊರಬರುತ್ತಿರುವ ನಾಲ್ಕು ಸರ್ಪಗಳನ್ನು ತೋರಿಸಲಾಗಿದೆ. ಬಾಹುಬಲಿಯ ಇನ್ನೆರಡು ಉಬ್ಬುಶಿಲ್ಪಗಳಲ್ಲಿ ಪಾದಗಳ ಪಾರ್ಶ್ವದಲ್ಲಿ ಎರಡೆರಡು ಸರ್ಪಗಳನ್ನು ತೋರಿಸಲಾಗಿದೆ. ಈ ನಾಲ್ಕೂ ಬಾಹುಬಲಿಯ ಉಬ್ಬುಶಿಲ್ಪಗಳಲ್ಲಿ ಪಾದಗಳ ಮಧ್ಯದಿಂದ ಏಕದಂಟಿನ ಮಾಧವೀ ಲತೆಗಳು ಹೊರಟು ತೊಡೆ ಮತ್ತು ಮೊಣಕಾಲು ಮಧ್ಯಭಾಗದಲ್ಲಿ ಟಿಸಿಲೊಡೆದು ತೊಡೆ ಮತ್ತು ಕೈಗಳನ್ನಾವರಿಸಿವೆ. ಎಲ್ಲ ಉಬ್ಬುಶಿಲ್ಪಗಳಲ್ಲಿ ಬಾಹುಬಲಿಯ ಶಿರದ ಹಿಂಭಾಗದಲ್ಲಿ ಪ್ರಭಾಮಂಡಲ ಮತ್ತು ಮೇಲ್ಭಾಗದಲ್ಲಿ ಮುಕ್ಕೊಡೆಯನ್ನು ತೋರಿಸಲಾಗಿದೆ. ದಕ್ಷಿಣ ಭಾರತದಲ್ಲಿ ಕ್ರಿ.ಶ. ಸುಮಾರು ೮–೯ನೆಯ ಶತಮಾನದ ಪೂರ್ವದಲ್ಲಿ ಬಾಹುಬಲಿಯ ಶಿಲ್ಪಗಳಲ್ಲಿ ಭುಜಗಳ ಮೇಲೆ ನೀಳವಾದ ಕೇಶರಾಶಿ ಇಳಿಬಿದ್ದಿರುವುದನ್ನು ತೋರಿಸಲಾಗಿದೆ. ನಂತರದ ಬಾಹುಬಲಿಯ ಶಿಲ್ಪಗಳಲ್ಲಿ ನೀಳಕೇಶರಾಶಿಯ ಬದಲು ಸುರುಳಿಯಾಕಾರದ ಗುಂಗುರು ಕೇಶರಾಶಿಯನ್ನು ತೋರಿಸುವ ಸಂಪ್ರದಾಯ ಪ್ರಾರಂಭವಾಯಿತು.[೮]

ಹಳ್ಳೂರಿನ ಎರಡು ಬಾಹುಬಲಿ ಉಬ್ಬುಶಿಲ್ಪಗಳಲ್ಲಿ ಭುಜಗಳವರೆಗೆ ಇಳಿಬಿದ್ದಿರುವ ಜಟಾರಾಶಿಯನ್ನು ಹಾಗೂ ಇನ್ನೆರಡು ಬಾಹುಬಲಿ ಉಬ್ಬುಶಿಲ್ಪಗಳಲ್ಲಿ ಗುಂಗುರು ಕೂದಲುಗಳನ್ನು ತೋರಿಸಿರುವುದು ಗಮನಾರ್ಹವಾಗಿದೆ. ಕರ್ನಾಟಕದಲ್ಲಿ ಬಾಹುಬಲಿ ಶಿಲ್ಪಗಳಿಗೆ ಸಂಬಂಧಿಸಿದಂತೆ ಈ ನಾಲ್ಕೂ ಉಬ್ಬುಶಿಲ್ಪಗಳು ಬಾಹುಬಲಿಯ ಉದ್ದವಾದ ಜಟಾರಾಶಿ ಸುರುಳಿಯಾಕಾರದ ಗುಂಗುರು ಕೂದಲುಗಳಿಗೆ ಪರಿವರ್ತನೆಯಾಗಿರುವ ಒಂದು ಮಹತ್ವದ ಸಂಧಿಕಾಲವನ್ನು ಸೂಚಿಸುತ್ತವೆ. ಇಲ್ಲಿ ಸರ್ಪಗಳನ್ನು ಕಂಡರಿಸಿರುವ ರೀತಿ ಬಾದಾಮಿ ಮತ್ತು ಐಹೊಳೆಯ ಉಬ್ಬುಶಿಲ್ಪಗಳ ಪ್ರಭಾವವನ್ನು ಎತ್ತಿ ತೋರಿಸುತ್ತದೆ. ತಮಿಳುನಾಡಿನ ಉತ್ತರ ಅರ್ಕಾಟ ಜಿಲ್ಲೆಯ ತಿರುಮಲೈನ ನೇಮಿನಾಥ ಬಸದಿಯಲ್ಲಿ ಕಲ್ಲುಬಂಡೆಯ ಮೇಲೆ ಕೊರೆದಿರುವ ಕ್ರಿ.ಶ. ಸುಮಾರು ೮ನೆಯ ಶತಮಾನದ ಬಾಹುಬಲಿಯ ಉಬ್ಬುಶಿಲ್ಪದಲ್ಲಿ ಗುಂಗುರು

ಕೇಶರಾಶಿಯಿದೆ. ಹಾಗೆಯೇ ದಕ್ಷಿಣ ಅರ್ಕಾಟ ಜಿಲ್ಲೆಯ ಚಿತ್ತಮೂರದಲ್ಲಿಯ ಕಲ್ಲುಬಂಡೆಯ ಮೇಲೆ ಕೊರೆದಿರುವ್ ಕ್ರಿ.ಶ. ಸುಮಾರು 9–10ನೆಯ ಶತಮಾನದ ಬಾಹುಬಲಿಯ ಉಬ್ಬುಶಿಲ್ಪದಲ್ಲಿ ಗುಂಗುರು ಕೇಶರಾಶಿಯಿದೆ.

**1.5. ಮುಳಗುಂದ**

ಗದಗ ಜಿಲ್ಲೆ ಮತ್ತು ತಾಲ್ಲೂಕಿನ ಮುಳಗುಂದ ಗ್ರಾಮವು ಮಳಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಅಂದು ಈ ಗ್ರಾಮವು ಬೆಳ್ವೊಲ–300 ಆಡಳಿತ ವಿಭಾಗದಲ್ಲಿನ ಮುಳುಗುಂದ–12 ಉಪ ಆಡಳಿತ ಘಟಕದ ಕೇಂದ್ರ ಪಟ್ಟಣವಾಗಿತ್ತು. ಇಲ್ಲಿ 'ಚಂದ್ರಿಕಾವಾಟ ಅನ್ವಯ' ಪರಂಪರೆಯ ಜೈನಾಚಾರ್ಯರು ಧರ್ಮಪ್ರಸಾರದೊಂದಿಗೆ ಬಸದಿಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ, ದಾನ–ದತ್ತಿಗಳಿಗೆ ವಿಶೇಷವಾಗಿ ಪ್ರೇರಣೆ ಕೊಡಮಾಡಿದ್ದಾರೆ.[9] ಇಲ್ಲಿಯ ಪಾರ್ಶ್ವನಾಥ ಬಸದಿಯ ಹಿಂಭಾಗದಲ್ಲಿ ನಿಸರ್ಗದತ್ತವಾದ ಬೃಹತ್ ಕಲ್ಲುಬಂಡೆಯ ಮೇಲೆ ಹದಿನಾಲ್ಕು ಅಡಿ ಎತ್ತರವಾದ ಬಾಹುಬಲಿಯ ಅಪೂರ್ಣ ಉಬ್ಬುಶಿಲ್ಪವಿದೆ. ಶಿಲ್ಪಿ ಬಾಹುಬಲಿಯ ಪ್ರತಿರೂಪವನ್ನು ರೇಖಾವಿನ್ಯಾಸದಲ್ಲಿ ಬಿಡಿಸಿಕೊಂಡು ಮೇಲ್ಭಾಗವನ್ನು ಕೆತ್ತಿದ್ದಾನೆ. ಕೆಳಭಾಗ ರೇಖಾವಿನ್ಯಾಸದಲ್ಲಿಯೇ ಉಳಿದುಕೊಂಡಿದೆ. ಅಂತರ–ಬಾಹ್ಯ ಪ್ರಮಾಣಗಳಿಂದ ಈ ಉಬ್ಬುಶಿಲ್ಪದ ಕಾಲಮಾನವು ಕ್ರಿ.ಶ. ಸುಮಾರು 10ನೆಯ ಶತಮಾನವೆಂದು ಖಚಿತವಾಗುತ್ತದೆ.

**1.6. ಹೊಂಬುಜ**

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹೊಂಬುಜ ಪಟ್ಟಣದಲ್ಲಿ ಬಾದಾಮಿ ಚಲುಕ್ಯರ ಮಹಾಸಾಮಂತರಾದ ಸಾಂತರರ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು 7ನೆಯ ಶತಮಾನದಲ್ಲಿ ಜೈನ ಬೋಗಾರ ಪಂಗಡದವರು (ಲೋಹಕಾರರು, ಕಂಚುಗಾರರು) ನೇಮಿನಾಥ ಬಸದಿಯನ್ನು ಮಾಡಿಸಿದ್ದಾರೆ. ಇದನ್ನು ಶಾಸನಗಳಲ್ಲಿ 'ಅಶೋಕವನ ಬಸದಿ', 'ಬೋಗಾರ ಬಸದಿ' ಎಂದೆಲ್ಲ ಕರೆಯಲಾಗಿದೆ.[10] ಈ ಬಸದಿಯ ನವರಂಗದ ಮಧ್ಯದಲ್ಲಿ ಬ್ರಹ್ಮಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವುಗಳಲ್ಲಿನ ಒಂದು ಸ್ತಂಭದ ಕಾಂಡಭಾಗದ ಪ್ರತ್ಯೇಕ ಚೌಕಟ್ಟುಗಳಲ್ಲಿ ಆರು ಅಂಗುಲಗಳಷ್ಟು ಎತ್ತರವಾಗಿರುವ ಬಾಹುಬಲಿ ಮತ್ತು ಶಿರದ ಮೇಲೆ ಐದು ಹೆಡೆಗಳ ಸರ್ಪವನ್ನು ಹೊಂದಿರುವ ಪಾರ್ಶ್ವನಾಥ ತೀರ್ಥಂಕರನ ಉಬ್ಬುಶಿಲ್ಪಗಳಿವೆ. ಬಾಹುಬಲಿಯ ಕೈಗಳು ಮತ್ತು ಕಾಲುಗಳನ್ನು ಮಾಧವೀ ಲತೆಗಳು

ಬಳಸಿವೆ. ಪಾರ್ಶ್ವಗಳಲ್ಲಿ ಇಬ್ಬರು ವಿದ್ಯಾಧರಿಯರು ದ್ವಿಭಂಗಿಯಲ್ಲಿ ನಿಂತು ಮಾಧವೀ ಲತೆಗಳನ್ನು ಬಿಡಿಸುತ್ತಿದ್ದಾರೆ. ಬಾಹುಬಲಿಯ ಜಡೆಗೂದಲು ಭುಜದವರೆಗೂ ಇಳಿಬಿದ್ದಿದೆ.

1.7. **ಧರ್ಮಸ್ಥಳ**

ಧರ್ಮಸ್ಥಳದ ನೆಲ್ಯಾಡಿ ಬೀಡಿನ ಹಿಂಭಾಗದ ಬೆಟ್ಟದ ಮೇಲೆ ಸ್ಥಳೀಯ ಹೆಗ್ಗಡೆಗಳು ಸುಮಾರು ಎಂಟುನೂರು ವರ್ಷಗಳ ಹಿಂದೆ ಅಂದರೆ ಕ್ರಿ.ಶ. ಸುಮಾರು 14ನೆಯ ಶತಮಾನದಲ್ಲಿ ಪೂರ್ವಾಭಿಮುಖವಾಗಿ ಚಂದ್ರಪ್ರಭನಾಥ (ಚಂದ್ರನಾಥಸ್ವಾಮಿ) ಬಸದಿಯನ್ನು ನಿರ್ಮಿಸಿದ್ದರು. ಅದು ಕಾಲಾಂತರದಲ್ಲಿ ಶಿಥಿಲವಾದ್ದರಿಂದ ಅದನ್ನು ಸ್ಥಳೀಯ ಧರ್ಮಾಧಿಕಾರಿ–

ಮಂಜೈಯ್ಯ ಹೆಗ್ಗಡೇರು ಸಂಕಲ್ಪಿಸಿದ

ಜಿರ್ಣೋಧಾರ ಸೇವೆ ಪ್ಲವನಾಮ

ಸಂ। ಶಾಲಿವಾಹನ 1823

ಇಮ್ಮಡಿ ಮಂಜಯ್ಯ ಹೆಗ್ಗಡೆ ಅವರು ಕ್ರಿ.ಶ. 1901ರಲ್ಲಿ ಜೀರ್ಣೋದ್ಧಾರ ಮಾಡಿಸಿದರು ಎಂದು ಈ ಬಸದಿಯ ಗರ್ಭಗೃಹದ ಭಿತ್ತಿಯಲ್ಲಿ ಬೆಳಕಿಗೆ ಬಂದಿರುವ ಐದು ಸಾಲುಗಳ ಕನ್ನಡ ಲಿಪಿ ಮತ್ತು ಭಾಷೆಯ ಶಾಸನದಿಂದ ಸ್ಪಷ್ಟವಾಗುತ್ತದೆ.[11] ಬಸದಿಯ ಸ್ತಂಭಗಳು, ಮರದ ತೊಲೆಗಳು ದುರ್ಬಲವಾಗಿದ್ದರಿಂದ ಇಂದಿನ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆ ಅವರು ಅದನ್ನು 2001ರಲ್ಲಿ ಮೂಲ ವಾಸ್ತು ಸ್ವರೂಪದಲ್ಲಿಯೇ ಶಿಲಾಮಯವಾಗಿ ಜೀರ್ಣೋದ್ಧಾರ ಮಾಡಿಸಿದ್ದಾರೆ. ವೀರೇಂದ್ರ ಹೆಗ್ಗಡೆ ಅವರು "ದೇವ ಮಂದಿರಗಳು ಕೇವಲ ದೇವರ ಮೂರ್ತಿಯ ಸ್ಥಾಪನೆಗಷ್ಟೇ ಸೀಮಿತವಾಗಬಾರದು, ಬಂದ ಭಕ್ತರಿಗೆ ನಮ್ಮ ಪರಂಪರೆಯ ಕಲೆಯ ಪರಿಚಯಗಳ ಜೊತೆಗೆ, ಉತ್ತಮ ಮೌಲ್ಯ ಸಂದೇಶಗಳೂ ಸಿಗುವಂತಾಗಿ ಅದರಿಂದ ಸತ್ಪ್ರೇರಣೆಯೂ ದೊರೆಯಬೇಕು" ಎಂಬ ಕಾರಣದಿಂದ ಈ ಬಸದಿಯ ಹೊರಸುತ್ತಿನ ಸಾಲಂಕೃತ ಸಾಲುಸ್ತಂಭಗಳಲ್ಲಿ ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸುವ, ತೀರ್ಥಂಕರರ ಪಂಚಕಲ್ಯಾಣಕ್ಕೆ ಸಂಬಂಧಿಸಿದ, ಸಮಕಾಲೀನ ಮತ್ತು ಪ್ರಾಚೀನ ಮುನಿ–ಆಚಾರ್ಯರು ಹಾಗೂ ಕನ್ನಡ ಕವಿಗಳ, ಅಲಂಕೃತ ಸಾಂಪ್ರದಾಯಿಕ, ಇನ್ನಿತರ ಸನ್ನಿವೇಶ–ಸಾಂದರ್ಭಿಕ ಉಬ್ಬುಶಿಲ್ಪಗಳನ್ನು ಕೆತ್ತಿಸಿದ್ದಾರೆ. ಇವುಗಳಲ್ಲಿ ಬಾಹುಬಲಿಯ ಎರಡು ಉಬ್ಬುಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ಪಟ್ಟಿಕೆಯಲ್ಲಿ ತಪಸ್ಸಿಗೆ ನಿಂತಿರುವ ಬಾಹುಬಲಿಗೆ ಭರತನು ಶರಣಾಗತನಾಗುವ ಸಾಂದರ್ಭಿಕ ಉಬ್ಬುಶಿಲ್ಪವಿದೆ. ಮತ್ತೊಂದು ಸ್ತಂಭದ ಪಟ್ಟಿಕೆಯಲ್ಲಿ ಕಠಿಣ ತಪಸ್ಸಿನಲ್ಲಿ ನಿರತನಾಗಿರುವ ಬಾಹುಬಲಿಯ ಕೈಕಾಲುಗಳನ್ನು ಮಾಧವೀ ಲತೆಗಳು ಬಳಸಿರುವ

ಉಬ್ಬುಶಿಲ್ಪವಿದೆ. ಈ ಉಬ್ಬುಶಿಲ್ಪಗಳ ರಚನೆಯಲ್ಲಿ ಪ್ರಸಿದ್ಧ ಶಿಲ್ಪಿಯಾದ ಕೆ. ದಕ್ಷಿಣಾಮೂರ್ತಿ, ಖ್ಯಾತ ಚಿತ್ರಕಲಾವಿದರಾದ ಪಿ. ಪುರುಷೋತ್ತಮ ಕಾರಂತ, ಕಲಾವಿದ ಗೋಪಾಲಕೃಷ್ಣ ಮೆನನ್ ಅವರ ಪಾತ್ರ ಪ್ರಮುಖವಾಗಿದೆ.

**1.8. ಮೇಳಿಗೆ**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಳಗಿ ಗ್ರಾಮದಲ್ಲಿ ಪೆನುಗೊಂಡೆ ವೆಂಕಟಾಚಲಪತಿರಾಯನ ಆಶ್ರಯದಲ್ಲಿದ್ದ ರಾಜಶ್ರೇಷ್ಠಿ ವರ್ಧಮಾನನ ಮಗನೂ ಮತ್ತು ವಿಶಾಲಕೀರ್ತಿ ಮುನಿಯ ಶಿಷ್ಯನೂ ಆದ ಬೊಮ್ಮಣ್ಣಶ್ರೇಷ್ಠಿ ಕ್ರಿ.ಶ. 1608ರಲ್ಲಿ ಅನಂತನಾಥ ಬಸದಿಯನ್ನು ನಿರ್ಮಿಸಿದ್ದಾನೆ.[12] ಈ ಬಸದಿಯ ಮುಂಭಾಗದಲ್ಲಿರುವ ಮಾನಸ್ತಂಭದ ಮೇಲೆ ಬಾಹುಬಲಿಯ ಉಬ್ಬುಶಿಲ್ಪವಿದೆ. ಬಾಹುಬಲಿಯ ಕೈಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ.

**1.9. ಮಂದರಗಿರಿ**

ತುಮಕೂರು ನಗರದ ಪೂರ್ವಭಾಗದಲ್ಲಿರುವ ಏಕಾಶಿಲಾ ಮಂದರಗಿರಿ ಬೆಟ್ಟವು ಇತ್ತೀಚಿಗೆ ಚಂದ್ರಪ್ರಭನಾಥ ತೀರ್ಥಂಕರನ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ. ಈ ಬೆಟ್ಟದ ಪರಿಸರದಲ್ಲಿ ಕ್ರಿ.ಶ. ಸುಮಾರು 9ನೆಯ ಶತಮಾನದಿಂದಲೂ ಜೈನ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತ ಬಂದಿವೆ. ಬೆಟ್ಟದ ಪರಿಸರದಲ್ಲಿ ಚಂದ್ರಪ್ರಭನಾಥ ಬಸದಿ ಮತ್ತು ಪದ್ಮಾವತಿ ಕೆರೆಯ ಮಧ್ಯದಲ್ಲಿರುವ ಬೃಹತ್ತಾದ ಬಂಡೆಗಲ್ಲಿನ ದಕ್ಷಿಣಮುಖದಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಸುಮಾರು ಆರು ಅಡಿ ಎತ್ತರವಾಗಿದೆ. ಇದನ್ನು ಕಾಲಾಂತರದಲ್ಲಿ ಕೆತ್ತಿ ನಾಶಪಡಿಸಲು ಪ್ರಯತ್ನಿಸಲಾಗಿದೆ. ಆದರೂ ಬಾಹುಬಲಿಯ ಸ್ವರೂಪವು ಸ್ಪಷ್ಟವಾಗಿ ಉಳಿದು ಬಂದಿದೆ.[13] ಅಂತರ-ಬಾಹ್ಯ ಪ್ರಮಾಣಗಳಿಂದ ಈ ಉಬ್ಬುಶಿಲ್ಪದ ಕಾಲಮಾನವು ಕ್ರಿ.ಶ. ಸುಮಾರು 10-11ನೆಯ ಶತಮಾನವೆಂದು ಖಚಿತವಾಗುತ್ತದೆ.

**ಸಮಾರೋಪ:**

ಇದುವರೆಗಿನ ಅವಲೋಕನದಿಂದ ಕರ್ನಾಟಕದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳ ಕಂಡರಣೆ ಮತ್ತು ಆರಾಧನೆ ಕ್ರಿ.ಶ. ಸುಮಾರು 7ನೆಯ ಶತಮಾನದಿಂದಲೂ ಸಾಂಗವಾಗಿ ಬೆಳೆದು ಬಂದಿರುವುದು ಗೋಚರಿಸುತ್ತದೆ. ಸಾಮಾನ್ಯವಾಗಿ ಬಾಹುಬಲಿ ಮತ್ತು ಪಾರ್ಶ್ವನಾಥನ ಉಬ್ಬುಶಿಲ್ಪಗಳು ಜೊತೆಜೊತೆಯಾಗಿಯೇ ಪ್ರತಿಷ್ಠಾಪಿತವಾಗಿವೆ. ತಮಿಳುನಾಡಿನ ಮೇಲಸಿತ್ತಮೂರು, ಚಿತ್ತಾಮೂರು,

ಕಲುಗುಮಲೈ, ಕಾರ್ಯೆಕೋಯಿಲ್, ತಿರುಮಲೈ, ಅರಮಲೈ, ವಳ್ಳಿಮಲೈ ಮೊದಲಾದೆಡೆಗಳಲ್ಲಿಯೂ ಬಾಹುಬಲಿ ಮತ್ತು ಪಾರ್ಶ್ವನಾಥನ ಉಬ್ಬುಶಿಲ್ಪಗಳನ್ನು ಜೊತೆಜೊತೆಯಾಗಿಯೇ ಕೊರೆಯಲಾಗಿದೆ. ಎಲ್ಲೆಲ್ಲಿ ಬಾಹುಬಲಿಯ ಶಿಲ್ಪಗಳು ಇವೆಯೋ ಅಲ್ಲೆಲ್ಲ ಪಾರ್ಶ್ವನಾಥನ ಶಿಲ್ಪಗಳೂ ಗೋಚರಿಸುತ್ತವೆ. ಇದಕ್ಕೆ ಇವರಿಬ್ಬರ ಕಠಿಣ ತಪಸ್ಸು, ಸಂದೇಶ ಮತ್ತು ಜನಪ್ರಿಯತೆಯೇ ಪ್ರಧಾನವಾಗಿ ಕಾಣುತ್ತದೆ. ಆದರೂ ಈ ನಿಟ್ಟಿನಲ್ಲಿ ತಲಸ್ಪರ್ಶಿ ಅಧ್ಯಯನದ ಅವಶ್ಯವಿದೆ.

ಕರ್ನಾಟಕದಲ್ಲಿರುವ ಈ ಮೇಲಿನ ಬಾಹುಬಲಿಯ ಉಬ್ಬುಶಿಲ್ಪಗಳಂತೆ ಭಾರತದ ಇತರೆಡೆಯಲ್ಲಿರುವ ಕೆಲವು ಬಾಹುಬಲಿಯ ಉಬ್ಬುಶಿಲ್ಪಗಳೂ ಗಮನಾರ್ಹವಾಗಿವೆ. ತಮಿಳುನಾಡಿನ ದಕ್ಷಿಣ ಆರ್ಕಾಟ ಜಿಲ್ಲೆಯ ಚಿತ್ತಮೂರದಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಉತ್ತರ ಆರ್ಕಾಟ ಜಿಲ್ಲೆಯ ತಿರುಮಲೈನ (ಅರಹಂತಗಿರಿ) ನೇಮಿನಾಥ ಬಸದಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ದಕ್ಷಿಣ ಆರ್ಕಾಟ ಜಿಲ್ಲೆಯ ಕಳಗುಮಲೈ ಬೆಟ್ಟದಲ್ಲಿನ ಒಂದು ಜೈನ ಗುಹಾಲಯದಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಪೋಲೂರು ತಾಲ್ಲೂಕಿನ ಓದಲವಾಡಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಸಮಕಾಲೀನ ಶಾಸನದಲ್ಲಿ ಈ ಬಾಹುಬಲಿಯನ್ನು 'ಅನಿಯಾದ ಅಲಗಿಯಾರ್' (ಆಭೂಷಣವಿಲ್ಲದೆ ಸುಂದರನಾಗಿರುವವನು) ಎಂದು ಕರೆಯಲಾಗಿದೆ. ಕಾಂಜೀವರಂ ಜಿಲ್ಲೆಯ ನರಕೊಯಿಲ್‌ದ ಬೆಟ್ಟದ ಬಂಡೆಯ ಮೇಲೆ ಬಾಹುಬಲಿಯ ಉಬ್ಬುಶಿಲ್ಪವಿದೆ. ಉತ್ತರ ಪ್ರದೇಶದ ಝೂಂಸಿ ಜಿಲ್ಲೆಯ ಲಲಿತಪುರ ತಾಲ್ಲೂಕಿನ ದೇವಗಡ ಸಮೀಪದ ಬೆಟ್ಟದಲ್ಲಿರುವ ಕೆಲವು ಬಸದಿಗಳಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳಿವೆ. ಇಲ್ಲಿರುವ ಒಂದು ಶಿಲ್ಪದಲ್ಲಿ ಸಾಲಾಗಿ ಬಾಹುಬಲಿ, ಅಭಿನಂದನನಾಥ, ಶೀತಲನಾಥರನ್ನು ತೋರಿಸಿರುವುದು ಗಮನೀಯವಾಗಿದೆ. ಮೂವರ ಶಿರದ ಮೇಲೂ ಮುಕ್ಕೊಡೆಗಳಿವೆ.[14]

ಮಧ್ಯಪ್ರದೇಶದ ಖಜುರಾಹೋದ ಪಾರ್ಶ್ವನಾಥ ಬಸದಿಯ ಭಿತ್ತಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಖಂದಾರಗಿರಿ ಬೆಟ್ಟದ ಮೇಲಿರುವ 1ನೆಯ ಗುಹಾಲಯದಲ್ಲಿ ಬಾಹುಬಲಿಯ ವಿಶಿಷ್ಟವಾದ ಉಬ್ಬುಶಿಲ್ಪವಿದೆ. ಈ ಶಿಲ್ಪದಲ್ಲಿ ಬಾಹುಬಲಿಯ ಕತ್ತಿನಲ್ಲಿ ಎರಡು ಸರ್ಪಗಳಿವೆ. ಒಂದು ಸರ್ಪ ಸೊಂಟವನ್ನು ಸುತ್ತಿಕೊಂಡಿದೆ. ಹೊಕ್ಕಳಿನ ಪಾರ್ಶ್ವದಲ್ಲಿ ಎರಡು ಇಲಿಗಳನ್ನು ತೋರಿಸಲಾಗಿದೆ. ಎರಡೂ ಕೈಗಳಲ್ಲಿ ಹಲ್ಲಿಗಳನ್ನು ಕೆತ್ತಲಾಗಿದೆ. ಮೊಣಕಾಲನ್ನು ಸರ್ಪ ಸುತ್ತಿಕೊಂಡಿದೆ. ಸ್ಥಳಿಯರು ಈ ಬಾಹುಬಲಿಯನ್ನು 'ಔಷಧ ಬಾಬಾ' ಎಂದು ಕರೆಯುತ್ತಾರೆ. ಬಿಲಹರಿಯಲ್ಲಿ ದೊರೆತ್ತಿರುವ ದ್ವಾರಬಂಧದ ಅವಶೇಷದ ಲಲಾಟಪಟ್ಟಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಗ್ವಾಲಿಯರ ಕೋಟೆಯ ಹೊರಭಾಗದ ಬೆಟ್ಟದ ಮೇಲುದ್ದಕ್ಕೂ ತೋಮರವಂಶದ ಡೊಂಗರಸಿಂಹ ಮತ್ತು ಆತನ ಉತ್ತರಾಧಿಕಾರಿ ಕೀರ್ತಿಸಿಂಹನ ಆಳ್ವಿಕೆಯ

ಕಾಲದಲ್ಲಿ ನೂರಾರು ಜೈನ ಶಿಲ್ಪಗಳನ್ನು ಕೆತ್ತಲಾಗಿದೆ. ಮೊಗಲ್ ಬಾದಷಹ ಬಾಬರನು ಕ್ರಿ.ಶ. 1527ರಲ್ಲಿ ಇಲ್ಲಿಯ ಶಿಲ್ಪಗಳೆಲ್ಲವನ್ನೂ ನಾಶಪಡಿಸಿರುವುದಾಗಿ ತನ್ನ 'ಬಾಬರನಾಮ' ಎಂಬ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾನೆ. ಹೀಗಾಗಿ ಪುಷ್ಪದಂತನಾಥ ತೀರ್ಥಂಕರನ ಶಿಲ್ಪವನ್ನು ಹೊರತುಪಡಿಸಿ ಉಳಿದೆಲ್ಲ ಶಿಲ್ಪಗಳೂ ತ್ರುಟಿತವಾಗಿವೆ. ತ್ರುಟಿತವಾದ ಶಿಲ್ಪಗಳಲ್ಲಿ ಬಾಹುಬಲಿಯ ಶಿಲ್ಪವೂ ಒಂದಾಗಿದೆ. ಗುಜರಾತಿನ ಶತ್ರುಂಜಯ ತೀರ್ಥದ ಆದಿನಾಥ ಬಸದಿಯಲ್ಲಿ ಭರತ-ಬಾಹುಬಲಿಯರ ಯುದ್ಧದ ಉಬ್ಬುಶಿಲ್ಪಗಳಿವೆ.[15]

ಕರ್ನಾಟಕವನ್ನು ಒಳಗೊಂಡಂತೆ ಭಾರತದ ಬೇರೆ ಬೇರೆ ಭಾಗಗಳಲ್ಲಿರುವ ಬಾಹುಬಲಿಯ ಉಬ್ಬುಶಿಲ್ಪಗಳ ಕುರಿತು ಇದುವರೆಗೂ ವಸ್ತುನಿಷ್ಠ ತಲಸ್ಪರ್ಶಿ ಅಧ್ಯಯನ ನಡೆದಿಲ್ಲ. ಭಾರತದಲ್ಲಿರುವ ಬಾಹುಬಲಿಯ ಉಬ್ಬುಶಿಲ್ಪಗಳೆಲ್ಲವನ್ನೂ ಒಂದೆಡೆಗೆ ಸಂಗ್ರಹಿಸಿ, ಇವುಗಳ ವೈಶಿಷ್ಟ್ಯತೆಯನ್ನು ಗುರುತಿಸುವ ಸಮಗ್ರವಾದ ಅಧ್ಯಯನ ಯೋಜನೆಯ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

## ಅಡಿಟಿಪ್ಪಣಿಗಳು

1. ಹಂಪೆ ಅಪ್ಪಣ್ಣ ಎನ್., "ಕರ್ನಾಟಕದಲ್ಲಿ ಬಾಹುಬಲಿ ಬಸದಿಗಳು ಮತ್ತು ಶಿಲ್ಪಗಳು", ಕ್ಷಿತಿಸಂಪೂಜ್ಯ (ಅಖಿಲ ಕರ್ನಾಟಕ ಜೈನ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಸಂಚಿಕೆ-2005), ಪು. 55-63, ಶ್ರವಣಬೆಳಗೊಳ. "ಕರ್ನಾಟಕದಲ್ಲಿ ಬಾಹುಬಲಿಯ ಬಸದಿಗಳು", ರೂವಾರಿ (ಶ್ರೀ ಎಸ್. ಜಿತೇಂದ್ರಕುಮಾರ್ ಅವರ ಅಭಿನಂದನ ಗ್ರಂಥ-2016), ಪು. 382-398, ಶ್ರೀ ಎಸ್. ಜಿತೇಂದ್ರಕುಮಾರ್ ಅಭಿನಂದನ ಸಮಿತಿ, ಬೆಂಗಳೂರು. "ಬಾಹುಬಲಿಯ ಜೀವನ ಚರಿತ್ರೆ", ಇತಿಹಾಸ ದರ್ಪಣ ಸಂ. 33-34 ಏಪ್ರಿಲ್-ಸೆಪ್ಟೆಂಬರ್ : 2017), ಪು. 15-32, ಬೆಂಗಳೂರು.

2. ಬಾದಾಮಿ ಚಲುಕ್ಯರ ಕಾಲಾವಧಿಯಲ್ಲಿ ಜೈನ ಧರ್ಮದ ಕುರಿತು ಹೆಚ್ಚಿನ ವಿವರಗಳಿಗೆ ಗಮನಿಸಿ; ಹಂಪ ನಾಗರಾಜಯ್ಯ, ಬಾಹುಬಲಿ ಅಂಡ್ ಬಾದಾಮಿ ಚಲುಕ್ಯಸ್ (2005), ಶ್ರವಣಬೆಳಗೊಳ. ಪಾಡಿಗಾರ ಶ್ರೀನಿವಾಸ, "ಬಾದಾಮಿಯ ಚಾಲುಕ್ಯರು : ಧಾರ್ಮಿಕ ವ್ಯವಸ್ಥೆ", ಬಾದಾಮಿ ಚಾಲುಕ್ಯರು ಲೇಖನ ಸಂಪುಟ (2009), ಪು. 171-177.

3. ಪಾಡಿಗಾರ ಶ್ರೀನಿವಾಸ, ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ (2008), ಪು. 69 ಮತ್ತು 74.

4. ಎ.ಕ. ಸಂ. II, ಶಾ.ಸಂ. 170.

5. ಅದೇ, ಶಾ.ಸಂ. 371 ಮತ್ತು 373.

6. ಅದೇ, ಶಾ.ಸಂ. 82, 154, 274, 277, 342, 355, 542.

7. ಹಂಪ ನಾಗರಾಜಯ್ಯ, "ಜೈನ ವಾಸ್ತು, ಶಿಲ್ಪ ವಿನ್ಯಾಸ : ವಿಹಂಗಮ ನೋಟ", ಜೈನ ವಾಸ್ತು ಮತ್ತು ಶಿಲ್ಪ (2017), ಪು. 16.

8. ರಾಜಶೇಖರ ಎಸ್., "ಕರ್ನಾಟಕದಲ್ಲಿ ಗೊಮ್ಮಟನ ಮೂರ್ತಿಶಿಲ್ಪ", ಬೆಳ್ವೊಲ (ಡಾ. ಆರ್.ಸಿ. ಹಿರೇಮಠ ಅವರ ಅಭಿವಂದನ ಗ್ರಂಥ-1981), ಪು. 437, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

9. ಮುಳಗುಂದದ ಬಸದಿಗಳು, ಶಿಲ್ಪಗಳು, ಶಾಸನಗಳು ಇತ್ಯಾದಿ ಹೆಚ್ಚಿನ ವಿವರಗಳಿಗೆ ಗಮನಿಸಿ; ಹಾಜವಗೋಳ ಧನವಂತ, ಮುಳುಗುಂದನಾಡು : ಒಂದು ಅಧ್ಯಯನ (2004), ಮಹಾದೇವಿ ಪ್ರಕಾಶನ ಧಾರವಾಡ. ಹಂಜೆ ಅಪ್ಪಣ್ಣ ಎನ್., ಲಕ್ಕುಂಡಿಯ ಬಸದಿಗಳು (2015), ಪು. 12-20.

10. ಹಂಪ ನಾಗರಾಜಯ್ಯ, ಸಾಂತರರು : ಒಂದು ಅಧ್ಯಯನ (1997), ಪು. 200-204.

11. ಶೆಟ್ಟಿ ಎಸ್.ಡಿ., "ಪುನರ್ನಿರ್ಮಾಣಗೊಂಡ ಚಂದ್ರನಾಥಸ್ವಾಮಿ ಬಸದಿಯ ವಾಸ್ತುಕಲೆ ಮತ್ತು ಅದರ ವೈಶಿಷ್ಟ್ಯಗಳು", ಚಂದ್ರನಾಥ (2001), ಪು. 47, ಎಸ್. ಪ್ರಭಾಕರ (ಸಂ.), ಧರ್ಮಸ್ಥಳ.

12. ಎ.ಕ. ಸಂ. VIII, ಶಾ.ಸಂ. 166.

13. ಪರಮಶಿವಮೂರ್ತಿ ಡಿ.ವಿ., "ಮಂದರಗಿರಿ ಮತ್ತು ಹೊಯ್ಸಳ ಹೆಗ್ಗಡತಿ ಮಾಚಿಯಕ್ಕಳ ನಿರ್ಮಾಣಗಳು", ವಜ್ರಪದ್ಮ (ಡಾ. ಎಸ್.ಪಿ. ಪದ್ಮಪ್ರಸಾದ-70 ಬದುಕು ಬರಹ : 2018), ಪು. 464, ಬಿ. ನಂಜುಂಡಸ್ವಾಮಿ (ಸಂ.), ಮಂಡ್ಯ.

14. ವಸಂತರಾಜಯ್ಯ ಎಸ್.ಬಿ., "ಕೆಲವು ಅಪೂರ್ವ ಪ್ರಾಚೀನ ಬಾಹುಬಲಿ ಪ್ರತಿಮೆಗಳು", ನಿತ್ಯವಸಂತ (2006), ಪು. 36-44.

15. ಮಿರ್ಜಿ ಅಣ್ಣಾರಾಯ (ಅನು.), ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ (1981), ಪು. 425-451.